ಅಂಟಿಕೊಂಡರೆ ಅಗ್ನಿ ಇವನು ಗುಣವಂತೆ ತಾಮಸ
ತಣಿದೆದೆಯು ತಂಪಾಯ್ತು ಮಂಜುಮನೆಯೆ ನಿವಾಸ ||
ಬಣ್ಣ ಬಣ್ಣ ಕಲ್ಪನೆಗಳು ಮನವ ಮುತ್ತಿಕೊಂಡಿಹವು
ರಂಗು ಕಳೆದ ಗಂಗೆ ತಳೆದು ಊಹೆಗೊಂದು ರೂಪವು ||

ಹರನೊಡನೆ ಅಕ್ಕಿಕಾಳು ಭ್ರಾಂತಿಯಾಗುತಿರಲು
ಅರೆ ಮುಚ್ಚಿದ ಕಣ್ಣುಗಳು ಕನಸಿನೊಳಗೆ ಜಾರಲು ||
ಅರಿಷಿಣ ಮೈಗಚ್ಚಿಕೊಂಡು ಮಂಗಳಜಲ ಜಳಕವಂತೆ
ಗಂಗೆ ಮೊಗ ರಂಗು ತುಂಬಿ ಹೊನ್ನು ಹೊಳೆಯುವಂತೆ ||

ಉಗುರುನಿಂದ ರೆಪ್ಪೆಗಳಿಗೆ ಕಾಡಿಗೆಯ ಹಚ್ಚಿಕೊಂಡು
ಗಂಗೆ ಕಣ್ಣು ಮೀನಿನಂತೆ ಕಾಂತಿಕೊಳದಿ ಮಿಂದವು ||
ಗಂಗೆ ಶಿವರ ನಟ್ಟನಡುವೆ ತೆರೆಬಟ್ಟೆಯ ಹಿಡಿದಂತೆ
ಶುಭಗಳಿಗೆ ಇದೆಯೆಂದು ಬ್ರಹ್ಮ ಕೂಗಿ ಹೇಳಿದಂತೆ ||

ಜೀರಿಗೆ ಜೋನಿಬೆಲ್ಲ ಅಂಗೈ ಮೇಲೆ ಇಟ್ಟಂತೆ
ತಲೆಯ ಮೇಲೆ ಕೈಯಿಟ್ಟರು ಸತಿಪತಿಗಳು ಆದಂತೆ ||
ಶಿವನ ಅಭಯಹಸ್ತವು ಗಂಗೆ ತಲೆಯ ತಾಕಿದಂತೆ
ಅಭಯಾನುಭೂತಿಯಾಯ್ತು ಸಾಂತ್ವನ ಸಿಕ್ಕಿದಂತೆ ||

ಶಿವನ ಶಿರದ ಮೇಲೆ ಗಂಗೆ ಮೆಲ್ಲನೆ ತಾ ಕೈಯಿಡಲು
ಈ ಸ್ಥಳವೇ ಸ್ಥಿರವೆಂದು ಮನಕೆ ಭಾಸವಾಗಿರಲು ||
ಗಂಗೆಯ ಸಿರಿ ಕೊರಳಿಗೆ ಮಾಂಗಲ್ಯವ ಕಟ್ಟಿದಂತೆ
ಮಂಗಳ ವಾದ್ಯವುಗೂಡಿ ಇಂಪಾಗಿ ಮೊಳಗಿದಂತೆ ||

ಶಿವನ ತಲೆಯ ಮೇಲೆ ನಾಂಟ್ಯವಾಡಿದಂತೆ ಗಂಗೆ
ದಿಟ್ಟಿಸಲು ಸತಿ ಪಾರ್ವತಿ ಸವತಿಗೆ ಮುನಿವಂಗೆ ||
ಅಮ್ಮ ಈ ಗಂಗೆ ನೋಡು ನಂಗ ನಾಚಿ ಸುಪನಾತಿ
ಹಿಂದು ಮುಂದು ನೋಡದೆ ಅಂದನಲ್ಲಾ ಗಣಪತಿ ||

ತಾಯಿ ನಾನಿರುವೆನಲ್ಲ ಏಕೆ ನಿನಗೆ ಕೊರಗು
ಅಮ್ಮನಲ್ಲಿ ವಿನಯದಿಂದ ಅರುಹಿದನು ಮುರುಗ ||
ನಾನಿಲ್ಲವೇ ತಾಯಿ ಇಲ್ಲಿ ಸಿಂಹನಾದ ಮಾಡುತ್ತಾ
ಜೂಲನೆಲ್ಲಾ ಜಾಡಿಸಿತು ಸಿಂಹ ಸಿಟ್ಟು ಕೋಪದಲ್ಲಿ ||

